# <u>ಕೃಷ್ಣ ಬಾರೋ ಶ್ರೀ ಕೃಷ್ಣ ಬಾರೋ</u>

1. **Ref.:** Purandara Sahitya Darshana, Samputa 4, Keerthana Darshana edited by Prof. S.K. Ramachandra Rao, page No. 121.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 195.
3. **Note:** Lyrics given here are almost similar to Ref. 2. These wordings are almost fully followed by the singer.
4. **Note:** As per my research, these wordings are fully correct.

ರಾಗ: ಮೋಹನ ತಾಳ: ಛಾಪು

ಕೃಷ್ಣ ಬಾರೋ ಶ್ರೀ ಕೃಷ್ಣ ಬಾರೋ
ಕೃಷ್ಣಯ್ಯ ನೀ ಬಾರಯ್ಯಾ ॥ ಪ ॥

ಸಣ್ಣ ಹೆಜ್ಜೆಯನಿಟ್ಟು ಗೆಜ್ಜೆ ನಾದಗಳಿಂದ
ಕೃಷ್ಣಾ ನೀ ಬಾರಯ್ಯ ॥ ಅಪ ॥

ಮನ್ಮಥ ಜನಕನೆ ಬೇಗನೆ ಬಾರೋ
ಕಮಲಾಪತಿ ನೀ ಬಾರೋ
ಅಮಿತ ಪರಾಕ್ರಮ ಶಂಕರ ಬಾರೋ
ಕಮನೀಯ ಗಾತ್ರನೆ ಬಾರಯ್ಯ ದೊರೆಯೆ ॥ ೧ ॥

ಕುರುಳು ಕೇಶಗಳ ಒಲಿವ ಅಂದ
ಭರದ ಕಸ್ತೂರಿ ತಿಲಕದ ಚೆಂದ
ಶಿರದಿ ಒಪ್ಪುವ ನವಿಲು ಕಣ್ಣಿಳಿಂದ
ಥರ ಥರದಾಭರಣಗಳ ಧರಿಸಿ ನೀ ಬಾರೋ ॥ ೨ ॥

ಹಾಲು ಬೆಣ್ಣೆಗಳ ಕೈಯಲ್ಲಿ ಕೊಡುವೆ
ಮೇಲಾಗಿ ಭಕ್ಷಗಳ ಮುಚ್ಚಿಟ್ಟು ತರುವೆ

ಜಾಲ ಮಾಡದೆ ನೀ ಬಾರಯ್ಯ ಮರಿಯೇ
ಬಾಲ ಎನ ತಂದೆ ಪುರಂದರ ವಿಠಲ    ॥ ೩ ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಅಮಿತ ಪರಾಕ್ರಮ** – ಎಣೆಯಿಲ್ಲದ ಸಾಹಸಮಾಡುವವನು.

**ಕಮನೀಯ ಗಾತ್ರ** – ಚೆಲುವಾದ ಮೈಯುಳ್ಳವನು.

**ಕುರುಳು** = ಸುರುಳು

**ಸುರುಳು ಕೇಶಗಳ** – ಗುಂಗುರು ಕೂದಲಿನ.

**ನವಿಲು ಕಣ್ಗಳು** – ನವಿಲ ಗರಿಗಳು.

**ಜಾಲ ಮಾಡದೆ** – ಮೋಸ ಮಾಡದೆ.

**Classification:** Keerthane
**Ankita:** tande purandara vittala
**Location:** NA
**Category:** Krishna Stuti
**Group Words:** krishna, padma, shiva, Kasturi, kannu, benne, navilu
**Pravachana:** NA
**Explanation:** NA